ಕಥೆ

# ಮಾಬಳೇಶ್ವರ ಯಾತ್ರಿ




**ಶ್ರೀದೇವಿ ಕಳಸದ**

ಕಲೆ: ಎಸ್.ವಿ. ಹೂಗಾರ್


ಕಚ್ಚಿ ಹಾಕ್ಕೊಂಡ ಭರಾಭರಾ ಹೊಂಟಬಿಡಾಕಿ ನಮ್ಮ ಆ್ಯಂಟಿಕ್ ಅಲೆಕ್ಸಾ ಸುಲೂತಾಯೀ. ಚಾಳಿನ್ಯಾಗ ಯಾರರೇ ಅಕಿ ಹೆಸರ ಕರದ್ರ ಸಾಕು ಹತ್ತತ್ರ ಐವತ್ತೆರಡರ ನಾಲ್ಕೂವರಿ ಫೂಟಿನ ಒಣಗಿದ ತುಪ್ಪೀರಿಕಾಯಿಯಂಥಾ ಅಕಿ ಮೈಯ್ಯೊಳಗ ಗಾಳಿ ಹೊಕ್ಕೊಂಡಂಗ ಆಗಿಬಿಡ್ತಿತ್ತು. ಯಾ ಮೂಲ್ಯಾಗಿಂದ ಯಾ ದನಿ ಬಂತು. ಆ ದನಿ ಏನು ಅಪೇಕ್ಷಾ ಮಾಡ್ತದ ಅನ್ನೂದು ಅಕಿ ತಲಿಯೊಳಗ ಹಿಂಗ ರಿಕಾರ್ಡ್ ಆಗಿತ್ತಲಾ, ಆ ಗಲೀವರ್ ಏನರೇ ಅಕಿಗೆ ತನ್ನ ಕಾಲು ಬಾಡಗಿ ಕೊಟ್ಟಾನೇನೋ ಅನ್ನೂಹಂಗ ಕರದಾವ್ರ ಮನೀಮುಂದ ಒಮ್ಮೆಲೇ ಪ್ರತ್ಯಕ್ಷ ಆಗಿಬಿಡಾಕಿ.

ಗುಳಿಗ್ಗಲ್ಲಾ, ಏಳಲೋ ಬ್ಯಾಡೋ ಅನ್ನೂ ಮಂಡ ಮೂಗಾ, ಬಾಜ್ರಾಕಾಳಟ ಮೂಗಬಟ್ಟಾ, ಸೀತಾಫಲ ಎಸಳಿಂದ ಹೊರಬಂದಟ ಬೀಜದಗತೆ ಕಣ್ಣಗುಡ್ಡಿ, ಚೀಪಿಟ್ಟ ಮಾಯಿನಗೊಟ್ಟದಂಥಾ ಹಣಿ. ಅದಕೊಂದ ಹೌದೋ ಅಲ್ಲೋ ಹಂಚೀಬಟ್ಟು, ಬೆಂಡೋಲಿ ಇಲ್ಲದ ತೂತಕಿವಿ, ಎರಡ ನಂಬರಿನ ಚಿಕ್ಕೀಬಳಿ, ಕಡೀನಂಬರ್ ಚಹಾ ಜಾರೀಗತ್ಲೇ ಸಣ್ಣ ತುರಬಾ ಮತ್ತ ಬರೀಗೊಳ್ಳಾ. ಹಿಂದಿಲ್ಲಾ ಮುಂದಿಲ್ಲಾ ಒಂಟಿಜೀಂವಾ. ತಾಯೀ ಅಂತ ಬಂದಾವ್ರಿಗೆ ಅಕ್ಕನೂ ಸೈ ಅವ್ವನೂ ಸೈ. ಹಿಂಗ ಒಮ್ಮೆ ಅಕಿ ಕೈಯ್ಯಾಗ ಮಾಬಳ್ಯಾ ಅನ್ನಾಂವಾ ಸಿಕ್ಕಿದ್ದಾ. ಮುಂದೇನಾತಂದ್ರ...

...ನಟಿ ಶುಭಾಂಗಿಗೆ ತಾನು ಕಂಡ, ಕೇಳಿದ ಹಳೆಯ ಸಂಗತಿಗಳನ್ನು ಹೀಗೆ ಅತ್ಯಂತ ಸ್ವಾರಸ್ಯಕರವಾಗಿ ಕಥೆಯಾಗಿಸುವ ಖಯಾಲಿ. ಆಕೆಯ ಪೂರ್ತಿ ಹೆಸರು ಶುಭಾಂಗಿ ಬೆಳಗಾಂವಕರ. ಬೆಳಗಾಂವಿ ಬಳಿಯ ಹಾಲಗಾ ಈಕೆಯ ಊರು. ಯಾರಾದರೂ ತನ್ನನ್ನು ಮಾತನಾಡಿಸಲಿ ಎಂದು ಕಾಯುವ ಜಾಯಮಾನದವಳೇ ಅಲ್ಲ. ಮಾತು ನಿಲ್ಲಿಸಿದರೆ ತನ್ನ ಬಾಯಿ ಎಲ್ಲಿ ಉಡುಗುತ್ತದೆಯೋ ಎಂಬಂತಿರುವವಳು. ಮಾತಿಗೆ ನಿಂತರೆ ಗಂಡೂ ಒಂದೇ ಹೆಣ್ಣೂ ಒಂದೇ. ಮಾತನಾಡುತ್ತ ಆಡುತ್ತ ಎಲ್ಲಿ ತಮ್ಮ ಬುಡಕ್ಕೇ ಬಂದುಬಿಡುತ್ತಾಳೇನೊ ಎಂದು ಅವಳಿಂದ ತಪ್ಪಿಸಿಕೊಂಡು ಓಡುತ್ತಿದ್ದವರೇ ಹೆಚ್ಚು. 'ಒಮ್ಮಿ ಮೂಗದಾಣ ಬಿತ್ತಂದ್ರ ಬಾಯೇನು